8(a)

3(b)
7(a)

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ವಿಶೇಷ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮಾರ್ಗಸೂಚಿಗಳಿಗೆ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:** ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಪತ್ರ ಸಂ: ಕೈವಾಇ/ಎಂಎಸ್ಎಂಇ/ಕೈವಿಅ1/ವಿಅಯೋ/ಮಾಸೂ/04/2016-17 ದಿ: 19.07.2016.

******

**ಪ್ರಸ್ತಾವನೆ**

ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು ಇವರು ಮೇಲೆ ಓದಲಾದ ಪ್ರಸ್ತಾವನೆಯಲ್ಲಿ ಡಾ|| ಡಿ.ಎಂ. ನಂಜುಂಡಪ್ಪ ಸಮಿತಿಯ ವರದಿಯನ್ವಯ ರಾಜ್ಯದ ಹಿಂದುಳಿದ, ಅತೀ ಹಿಂದುಳಿದ ಅತ್ಯಂತ ಹಿಂದುಳಿದ, ತಾಲ್ಲೂಕಿನ ಪ್ರಾದೇಶಿಕ ಅಸಮತೋಲನೆಯನ್ನು ನಿವಾರಿಸಿ, ಕೈಗಾರಿಕೆಗಳ ಸಮಗ್ರ ಬೆಳವಣಿಗೆಗಾಗಿ ಉನ್ನತಾಧಿಕಾರ ಸಮಿತಿಯ ಶಿಫಾರಸ್ಸಿನಂತೆ ವಿಶೇಷ ಅಭಿವೃದ್ಧಿ ಯೋಜನೆಯನ್ನು 2007-08ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಅನುಷ್ಠಾನಗೊಳಿಸುವ ಯೋಜನೆ / ಕಾರ್ಯಕ್ರಮಗಳಿಗೆ ಯೋಜನೆ ಕಾರ್ಯಕ್ರಮ ಮತ್ತು ಸಾಂಖ್ಯಿಕ ಇಲಾಖೆಯು 2010-11ರಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯ ಮಾರ್ಗಸೂಚಿಗಳಂತೆ ರಾಜ್ಯದ 4 ವಿಭಾಗಗಳಾದ ಗುಲ್ಬರ್ಗ, ಬೆಂಗಳೂರು, ಬೆಳಗಾವಿ ಮತ್ತು ಮೈಸೂರು ವಿಭಾಗಗಳಿಗೆ ಈ ಪ್ರದೇಶಗಳಲ್ಲಿ ಗುರುತಿಸಲಾದ ಅತ್ಯಂತ, ಅತೀ ಹಾಗೂ ಹಿಂದುಳಿದ ತಾಲ್ಲೂಕುಗಳಲ್ಲಿರುವ ನಿರುದ್ಯೋಗಿ ಯುವಕ / ಯುವತಿಯರಿಗೆ ಕೈಗಾರಿಕೆಗಳಲ್ಲಿ ಉದ್ಯೋಗಾವಕಾಶ ಮತ್ತು ಸ್ವಂತ ಉದ್ದಿಮೆಗಳ ಸ್ಥಾಪನೆಗಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಪರಿಷ್ಕರಿಸಿದ ಮಾರ್ಗಸೂಚಿಗಳನ್ನು ಸಿದ್ಧಪಡಿಸಿ, ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಐ 27 ಸಪ್ರಕೈ 2016 ಬೆಂಗಳೂರು, ದಿನಾಂಕ: 30.08.2016**

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ವಿಶೇಷ ಅಭಿವೃದ್ಧಿ ಯೋಜನೆಯ-ವಿಶಿಷ್ಟ ಕೌಶಲ್ಯಾಭಿವೃದ್ಧಿ ಸಂಸ್ಥೆಗಳು ಯೋಜನೆಯಡಿ ಜಿಟಿಟಿಸಿ ಹಾಗೂ ಸರ್ಕಾರಿ ಸಂಸ್ಥೆಗಳ ಮೂಲಕ ಆಧುನಿಕ ವೃತ್ತಿಗಳಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ನಡೆಸಲು ಅಗತ್ಯವಿರುವ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸಲು ಮತ್ತು ವಿಶೇಷ ಅಭಿವೃದ್ಧಿ ಯೋಜನೆಯ- ಹೊಸ ಔದ್ಯಮಿಕ ಸಮೂಹಗಳ ಸ್ಥಾಪನೆ ಯೋಜನೆಯಡಿ ಕೈಗಾರಿಕಾ ಪ್ರದೇಶ ಹಾಗೂ ಕೈಗಾರಿಕಾ ವಸಾಹತುಗಳಲ್ಲಿ ಎಂಎಸ್ಎಂಇ ಕೈಗಾರಿಕೆಗಳಿಗೆ ಪೂರಕವಾಗಿ ಬೇಕಾಗಿರುವ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮ / ಯೋಜನೆಗಳಿಗೆ ಮರುರೂಪಿಸಿದ ಈ ಕೆಳಕಂಡ ಮಾರ್ಗಸೂಚಿಗಳಿಗೆ ಅನುಮೋದನೆ ನೀಡಲಾಗಿದೆ. ಈ ಯೋಜನೆಯ ಅನುಷ್ಠಾನವನ್ನು ಈ ಆದೇಶದಲ್ಲಿ ಅನುಮೋದಿಸಲಾಗಿರುವ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸತಕ್ಕದ್ದು.

ಈ ಯೋಜನೆಯ ಮಾರ್ಗಸೂಚಿ ಕುರಿತಂತೆ ಸರ್ಕಾರದಿಂದ ಹಿಂದೆ ಹೊರಡಿಸಲಾಗಿರುವ ಎಲ್ಲಾ ಆದೇಶಗಳನ್ನು ರದ್ದುಪಡಿಸಲಾಗಿದೆ.

## ವಿಶೇಷ ಅಭಿವೃದ್ಧಿ ಯೋಜನೆಯ ಅನುಷ್ಠಾನದ ಮಾರ್ಗಸೂಚಿಗಳು

ಡಾ: ಡಿ.ಎಂ.ನಂಜುಂಡಪ್ಪನವರ ಸಮಿತಿಯ ವರದಿಯನ್ವಯ ರಾಜ್ಯದಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಿಸಲು ರಚಿಸಲಾಗಿರುವ ಉನ್ನತಾಧಿಕಾರ ಸಮಿತಿಯ ಶಿಫಾರಸ್ಸಿನಂತೆ ವಿಶೇಷ ಅಭಿವೃದ್ಧಿ ಯೋಜನೆಯನ್ನು 2007–08ನೇ ಸಾಲಿನಿಂದ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆ, ಕಾರ್ಯಕ್ರಮ ಮತ್ತು ಸಾಂಖ್ಯಿಕ ಇಲಾಖೆಯಿಂದ 2010–11 ರಲ್ಲಿ ವಿಶೇಷ ಅಭಿವೃದ್ಧಿ ಯೋಜನೆ ಅನುಷ್ಠಾನ ಕುರಿತ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ. ಯೋಜನಾ ಇಲಾಖೆಯ ಮಾರ್ಗಸೂಚಿಯಂತೆ ರಾಜ್ಯದ 04 ವಿಭಾಗಗಳಾದ ಗುಲ್ಬರ್ಗಾ, ಬೆಂಗಳೂರು, ಬೆಳಗಾವಿ ಮತ್ತು ಮೈಸೂರು ವಿಭಾಗಗಳಿಗೆ ಈ ಪ್ರದೇಶದಲ್ಲಿ ಗುರುತಿಸಲಾದ ಅತ್ಯಂತ, ಅತೀ ಹಾಗೂ ಹಿಂದುಳಿದ ತಾಲ್ಲೂಕುಗಳಲ್ಲಿರುವ ನಿರುದ್ಯೋಗಿ ಯುವಕರಿಗೆ ಕೈಗಾರಿಕೆಗಳಲ್ಲಿ ಉದ್ಯೋಗಾವಕಾಶ ಮತ್ತು ಸ್ವಂತ ಉದ್ದಿಮೆಗಳ ಸ್ಥಾಪನೆಗಾಗಿ ಅನುಕೂಲಗಳನ್ನು ಒದಗಿಸಲು ವಾರ್ಷಿಕ ಕಾರ್ಯ ಯೋಜನೆಯನ್ನು ಸಿದ್ಧಪಡಿಸಿಕೊಂಡು ವಾರ್ಷಿಕ ಆಯವ್ಯಯದ ಅನುದಾನದ ಮೊತ್ತಕ್ಕೆ ವಿಭಾಗವಾರು ಹಂಚಿಕೆ ಮಾಡಿಕೊಂಡ ಕಾರ್ಯಯೋಜನೆಗೆ ಯೋಜನೆ, ಕಾರ್ಯಕ್ರಮ ಮತ್ತು ಸಾಂಖ್ಯಿಕ ಇಲಾಖೆಯ ಅನುಮೋದನೆಯನ್ನು ಪಡೆದು ನಂತರ ಆರ್ಥಿಕ ಇಲಾಖೆಯು ಕಾಲಕಾಲಕ್ಕೆ ನಿಗಧಿಪಡಿಸಿದ ಅನುದಾನವನ್ನು ಬಿಡುಗಡೆಗೊಳಿಸತಕ್ಕದ್ದು.

## ವಿಶೇಷ ಅಭಿವೃದ್ಧಿ ಯೋಜನೆ–ವಿಶಿಷ್ಟ ಕೌಶಲ್ಯಾಭಿವೃದ್ಧಿ ಸಂಸ್ಥೆಗಳು (ಲೆಕ್ಕ ಶೀರ್ಷಿಕೆ 4851–00–102 –0–09)(133)

ಕೈಗಾರಿಕೆಗಳಿಗೆ ಅಗತ್ಯವಿರುವ ನುರಿತ ಕೌಶಲ್ಯವುಳ್ಳ ಮಾನವ ಸಂಪನ್ಮೂಲವನ್ನು ಒದಗಿಸಲು ಅನುವಾಗುವಂತೆ ವಿವಿಧ ವೃತ್ತಿಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಈ ಕೇಂದ್ರಗಳಿಗೆ ಅಗತ್ಯವಿರುವ ಕಾರ್ಯಾಗಾರ, ತರಬೇತಿ ಕಟ್ಟಡ, ವಸತಿ ನಿಲಯ, ಆಧುನಿಕ ಯಂತ್ರೋಪಕರಣ ಮತ್ತು ಉಪಕರಣಗಳ ಖರೀದಿಗೆ ಅವಕಾಶ ಕಲ್ಪಿಸಲಾಗುತ್ತಿದೆ. ಈ ದಿಸೆಯಲ್ಲಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ) ಹಾಗೂ ಸರ್ಕಾರಿ ಸಂಸ್ಥೆಗಳ ಮೂಲಕ ಆಧುನಿಕ ವೃತ್ತಿಗಳಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ನಡೆಸಲು ಅಗತ್ಯವಿರುವ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಒದಗಿಸುವುದು ಯೋಜನೆಯ ಉದ್ದೇಶವಾಗಿರುತ್ತೆ.

**ಎ) ಅನುಷ್ಠಾನ ಸಂಸ್ಥೆಗಳು:**

1. ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ).
2. ಸರ್ಕಾರದಿಂದ ನೇರವಾಗಿ ಸ್ಥಾಪಿತಗೊಂಡ ಸಂಸ್ಥೆಗಳು.

**ಬಿ) ಅನುಷ್ಠಾನ ಸಂಸ್ಥೆಗಳು ಸಲ್ಲಿಸಬೇಕಾದ ದಾಖಲಾತಿಗಳು:**

**ಅ) ಕಟ್ಟಡ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ**

- ಹೊಸ ಸಂಸ್ಥೆ/ ಕೇಂದ್ರವಾಗಿದ್ದಲ್ಲಿ ಸರ್ಕಾರದ ಅನುಮೋದಿತ ಆದೇಶ.
- ಸಂಸ್ಥೆಯ ಹೆಸ್ರಿನಲ್ಲಿ ಭೂಮಿ/ ಕಟ್ಟಡ ಇರುವ ಬಗ್ಗೆ ದಾಖಲಾತಿಗಳು.
- ಕಟ್ಟಡದ ನೀಲಿ ನಕ್ಷೆ.
- ಪ್ರಸಕ್ತ ಸಾಲಿನ ಎಸ್.ಆರ್ ದರದಂತೆ ತಾಂತ್ರಿಕ ಅನುಮೋದನೆಯೊಂದಿಗೆ ಅಂದಾಜು ಪಟ್ಟಿ.
- ಉದ್ದೇಶಿತ ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ತಯಾರಿಸಿದ ಪರ್ಟ ಚಾರ್ಟ.
- ಕಟ್ಟಡದ ಅವಶ್ಯಕತೆ ಬಗ್ಗೆ ವಿಸ್ತೃತವಾದ ವರದಿ, ನಿರ್ಮಾಣ ಸಂಸ್ಥೆಯ ವಿವರಗಳೊಂದಿಗೆ.

- ಕಾಮಗಾರಿಯ ನಿರ್ಮಾಣಕ್ಕೆ ಸಂಬಂಧಪಟ್ಟ ಸಂಸ್ಥೆಯ ಆಡಳಿತ ಮಂಡಳಿ / ಸಮಿತಿ ಅನುಮೋದನೆ ಪಡೆದಿರುವ ಪ್ರತಿ.
- ಕೇಂದ್ರದಲ್ಲಿ ಈಗಾಗಲೇ ಇರುವ ಕಟ್ಟಡಗಳ ವಿವರ ಹಾಗೂ ಅವುಗಳ ಬಳಕೆ ಬಗ್ಗೆ ವಿವರಣೆ.
- ಸದರಿ ಪ್ರಸ್ತಾವನೆ ಕುರಿತು ಈಗಾಗಲೇ ಸರ್ಕಾರದಿಂದ ವಿವಿಧ ಯೋಜನೆಗಳಡಿ ಬಿಡುಗಡೆ ಮಾಡಿರುವ ಅನುದಾನ, ಬಳಕೆ ಹಾಗೂ ಬಳಕೆ ಪ್ರಮಾಣ ಪತ್ರ ಸಲ್ಲಿಸಿರುವ ಕುರಿತಂತೆ ವಿವರ ಹಾಗೂ ಸೃಜಿಸಿರುವ ಸ್ಥಿರಾಸ್ತಿಗಳ ವಿವರಗಳು.

**ಆ) ಯಂತ್ರೋಪಕರಣಗಳು:**

- ಖರೀದಿಸಲು ಉದ್ದೇಶಿಸಿರುವ ಯಂತ್ರೋಪಕರಣಗಳ ಪಟ್ಟಿ (ವೃತ್ತಿವಾರು/ಚಟುವಟಿಕೆವಾರು) ಸ್ಪೆಸಿಫಿಕೇಷನ್ ಮತ್ತು ಅಂದಾಜು ಬೆಲೆ ಸಹಿತ, ಹಾಗೂ ಅವುಗಳ ಅವಶ್ಯಕತೆ ಬಗ್ಗೆ ವಿವರಣೆ.
- ಸದರಿ ಪ್ರಸ್ತಾವನೆಯಲ್ಲಿ ಖರೀದಿಸಲು ಉದ್ದೇಶಿಸಿರುವ ಯಂತ್ರೋಪಕರಣಗಳು ಈಗಾಗಲೇ ಕೇಂದ್ರದಲ್ಲಿ ಲಭ್ಯವಿದ್ದಲ್ಲಿ ಅದರ ವಿವರ.
- ಉದ್ದೇಶಿತ ಯಂತ್ರೋಕಪರಣಗಳ ಖರೀದಿಸಲು ತಗಲುವ ಅಂದಾಜು ಬೆಲೆಗೆ ಆಡಳಿತ ಮಂಡಳಿ / ಸಮಿತಿ ಅನುಮೋದನೆ ಪಡೆದಿರುವ ಪ್ರತಿ.
- ಸದರಿ ಪ್ರಸ್ತಾವನೆ ಈಗಾಗಲೇ ಸರ್ಕಾರದಿಂದ ವಿವಿಧ ಯೋಜನೆಗಳಡಿ ಬಿಡುಗಡೆ ಮಾಡಿರುವ ಅನುದಾನ, ಬಳಕೆ ಹಾಗೂ ಬಳಕೆ ಪ್ರಮಾಣ ಪತ್ರ ಸಲ್ಲಿಸಿರುವ ಕುರಿತ ಹಾಗೂ ಸೃಜಿಸಿರುವ ಸ್ಥಿರಾಸ್ತಿಗಳ ವಿವರಗಳು.
- ಉದ್ದೇಶಿತ ಯಂತ್ರೋಕಪರಣಗಳ ಖರೀದಿ/ ಅಳವಡಿಕೆಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ತಯಾರಿಸಿದ ಪರ್ಟ ಚಾರ್ಟ.

**ಷರತ್ತು ಮತ್ತು ನಿಬಂಧನೆಗಳು:**

- ಬಿಡುಗಡೆಯಾದ ಅನುದಾನವನ್ನು ಅನುಮೋದಿತ ಕಾರ್ಯಕ್ರಮಗಳಿಗೆ ಮಾತ್ರ ಬಳಸತಕ್ಕದ್ದು.
- ಯೋಜನಾ ವೆಚ್ಚಕ್ಕಿಂತ ಹೆಚ್ಚುವರಿಯಾದಲ್ಲಿ ಅದನ್ನು ಸಂಸ್ಥೆಯೇ ಭರಿಸತಕ್ಕದ್ದು. ಯೋಜನೆ ಅನುಷ್ಠಾನವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ಅದರಡಿಯಲ್ಲಿ ರೂಪಿಸಿರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
- ಯೋಜನೆ ಅನುಷ್ಠಾನವನ್ನು ಪರ್ಟ ಚಾರ್ಟ ಪ್ರಕಾರ ಪೂರ್ಣಗೊಳಿಸಿ ಉಪಯುಕ್ತತಾ ಪ್ರಮಾಣ ಪತ್ರ ಮತ್ತು ಖರ್ಚಿನ ವಿವರ ಸಲ್ಲಿಸತಕ್ಕದ್ದು.
- ಕಟ್ಟಡದ ನಿರ್ಮಾಣಕ್ಕೆ ಸಂಬಂಧಿಸಿದ ಗುಣಮಟ್ಟದ ತಪಾಸಣಾ ವರದಿಯನ್ನು ಮೂರನೇ ವ್ಯಕ್ತಿ / ಸಂಸ್ಥೆಯಿಂದ ಖಾತರಿ ಪಡಿಸತಕ್ಕದ್ದು.
- ಹಳೆಯ ಯಂತ್ರೋಪಕರಣ / ಉಪಕರಣಗಳ ಖರೀದಿಗೆ ಅವಕಾಶ ಇರುವುದಿಲ್ಲ.
- ಸರ್ಕಾರವು ಆಗಿಂದಾಗ್ಗೆ ಸೂಚಿಸುವ ನಿಯಮ ಹಾಗೂ ನಿರ್ದೇಶನಗಳ ಪಾಲನೆ ಮಾಡತಕ್ಕದ್ದು.

**ಯೋಜನೆ ಅನುಷ್ಠಾನ:**

- ಯೋಜನೆ, ಕಾರ್ಯಕ್ರಮ ಮತ್ತು ಸಾಂಖ್ಯಿಕ ಇಲಾಖೆಯು ಆಯಾ ವರ್ಷದ ಆಯವ್ಯಯದಲ್ಲಿ ಇಲಾಖೆಗೆ ನಿಗದಿಪಡಿಸುವ ಅನುದಾನಕ್ಕೆ ಕ್ರಿಯಾಯೋಜನೆಯನ್ನು ಸಂಬಂಧ ಪಟ್ಟ ಅನುಷ್ಠಾನ ಸಂಸ್ಥೆಗಳಿಂದ ಆಯುಕ್ತರು, ಕೈಗಾರಿಕಾಭಿವೃದ್ಧಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರು ಪಡೆದು ಸರ್ಕಾರದ ಮುಖಾಂತರ ಯೋಜನಾ ಇಲಾಖೆಯ ಅನುಮೋದನೆಯನ್ನು ಪಡೆಯುವುದು.
- ಅನುದಾನ ಬಿಡುಗಡೆಗೆ ಸಂಬಂಧಿಸಿದಂತೆ ಅಗತ್ಯ ದಾಖಲೆಗಳೊಂದಿಗೆ ಅನುಷ್ಠಾನ ಸಂಸ್ಥೆಗಳು ಪ್ರಸ್ತಾವನೆಯನ್ನು ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.
- ನಿರ್ದೇಶನಾಲಯವು ಪ್ರಸ್ತಾವನೆಯನ್ನು ಮಾರ್ಗಸೂಚಿಯನ್ವಯ ಪರಿಶೀಲಿಸಿದ ನಂತರ ಅನುದಾನ ಬಿಡುಗಡೆಗೆ ಸರ್ಕಾರಕ್ಕೆ ಸಲ್ಲಿಸುವುದು.

* ಅನುಷ್ಠಾನ ಸಂಸ್ಥೆಯು ಬಿಡುಗಡೆಯಾಗಿರುವ ಅನುದಾನವನ್ನು ಸದ್ಬಳಕೆ ಮಾಡಲು ಕೈಗೊಂಡಿರುವ ಕ್ರಮವನ್ನು ಪರಿಶೀಲಿಸಿ ತದನಂತರ ನಿರ್ದೇಶನಾಲಯವು ಬಾಕಿ ಅನುದಾನ ಬಿಡುಗಡೆಗೆ ಕ್ರಮ ಜರುಗಿಸತಕ್ಕದ್ದು.

**ವಿಶೇಷ ಅಭಿವೃದ್ಧಿ ಯೋಜನೆ- ಹೊಸ ಔದ್ಯಮಿಕ ಸಮೂಹಗಳ ಸ್ಥಾಪನೆ:**
**(ಲೆಕ್ಕ ಶೀರ್ಷಿಕೆ 2852-80-003-0-12) (133)**

ವಿಶೇಷ ಅಭಿವೃದ್ಧಿ ಯೋಜನೆಯಡಿ ರಾಜ್ಯದಲ್ಲಿ ಗುರುತಿಸಿರುವ ಅತೀ ಹಿಂದುಳಿದ, ಅತ್ಯಂತ, ಹಿಂದುಳಿದ ತಾಲ್ಲೂಕುಗಳಲ್ಲಿ ಹೊಸದಾಗಿ ಸ್ಥಾಪಿಸುವ ಕೈಗಾರಿಕಾ ಪ್ರದೇಶ ಹಾಗೂ ಕೈಗಾರಿಕಾ ವಸಾಹತುಗಳಲ್ಲಿ ಎಂಎಸ್‌ಎಂಇ ಕೈಗಾರಿಕೆಗಳಿಗೆ ಪೂರಕವಾಗಿ ಬೇಕಾಗಿರುವ ರಸ್ತೆ, ನೀರು, ಒಳಚರಂಡಿ, ವಿದ್ಯುತ್ ಇತ್ಯಾದಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮಾಡಲು ಅನುದಾನವನ್ನು ಒದಗಿಸುವುದು ಯೋಜನೆಯ ಉದ್ದೇಶವಾಗಿರುತ್ತದೆ.

**(ಎ) ಅನುಷ್ಠಾನ ಸಂಸ್ಥೆಗಳು:**

1. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆ.ಐ.ಎ.ಡಿ.ಬಿ).
2. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ (ಕೆಎಸ್‌ಎಸ್‌ಐಡಿಸಿ).
3. ನೇರವಾಗಿ ಸರ್ಕಾರದಿಂದ ಸ್ಥಾಪಿತಗೊಂಡ ಸಂಘ / ಸಂಸ್ಥೆಗಳು.
4. ಇತರೆ ನೋಂದಾಯಿತ ಸಂಘ ಸಂಸ್ಥೆಗಳು.

**(ಬಿ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆ.ಐ.ಎ.ಡಿ.ಬಿ) ಮತ್ತು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ (ಕೆಎಸ್‌ಎಸ್‌ಐಡಿಸಿ) ಹಾಗೂ ನೇರವಾಗಿ ಸರ್ಕಾರದಿಂದ ಸ್ಥಾಪಿತಗೊಂಡ ಸಂಘ / ಸಂಸ್ಥೆಗಳು ಸಲ್ಲಿಸಬೇಕಾದ ದಾಖಲಾತಿಗಳು:**

* ಅಭಿವೃದ್ಧಿ ಪಡಿಸಲಿರುವ ಕೈಗಾರಿಕಾ ಕ್ಷೇತ್ರವು ಹೊಸದಾಗಿರುವ ಬಗ್ಗೆ ಸ್ಪಷ್ಟವಾದ ವಿವರಣೆ.
* ಕೈಗಾರಿಕಾ ಭೂಮಿಯು ಸಂಸ್ಥೆಯ ಹೆಸರಿನಲ್ಲಿ ವರ್ಗಾವಣೆ ಆಗಿರುವ ಬಗ್ಗೆ ಎಲ್ಲ ಸರ್ವೆ ನಂಬರ್‌ಗಳನ್ನು ಹೊಂದಿರುವ ದಾಖಲಾತಿ ಪತ್ರ. ಈ ಸಂದರ್ಭದಲ್ಲಿ ಸಂಪೂರ್ಣ ಜಮೀನು ಕೈಗಾರಿಕಾ ಉದ್ದೇಶಕ್ಕಾಗಿ ಮೀಸಲಿದೆ ಎಂಬ ಬಗ್ಗೆ ಕೂಡ ದೃಢೀಕರಿಸುವುದು.
* ಸದರಿ ಉದ್ದೇಶಿತ ಕೈಗಾರಿಕಾ ಪ್ರದೇಶ/ ವಸಾಹತುವಿನ ಅಭಿವೃದ್ಧಿ ಕಾಮಗಾರಿಗಳಿಗೆ ಈಗಾಗಲೇ ಸರ್ಕಾರದ ವಿವಿಧ ಯೋಜನೆಗಳಡಿಯಲ್ಲಿ ಅನುದಾನ ಪಡೆಯಲಾಗಿದೆಯೇ ಎಂಬ ಬಗ್ಗೆ ವಿವರಗಳು.
* ಉದ್ದೇಶಿತ ಕೈಗಾರಿಕಾ ಪ್ರದೇಶ/ ವಸಾಹತುವಿನಲ್ಲಿ ಅಬಿವೃದ್ಧಿ ಪಡಿಸುವ ಒಟ್ಟು ನಿವೇಶನ, ಹಾಗೂ ಮಳಿಗೆಗಳ ನಿರ್ಮಾಣ.
* ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾದ ಕೈಗಾರಿಕಾ ಪ್ರದೇಶದ ನೀಲಿ ನಕ್ಷೆ.
* ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾದ ಪ್ರಸಕ್ತ ವರ್ಷದ ಎಸ್.ಆರ್. ದರಗಳಂತೆ ಅಂದಾಜು ವೆಚ್ಚ.
* ಪ್ರಸ್ತುತ ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರೈಸಲು ತಯಾರಿಸಿದ ಪರ್ಟ್ ಚಾರ್ಟ್.
* ಸರ್ಕಾರದ ಅನುದಾನವನ್ನು ಹೊರತುಪಡಿಸಿ ಉಳಿದ ವೆಚ್ಚವನ್ನು ಸಂಸ್ಥೆಯಿಂದ ಭರಿಸುವ ಬಗ್ಗೆ ಒಪ್ಪಿಗೆ ಪತ್ರ.
* ಹೊಸ ಕೈಗಾರಿಕಾ ಪ್ರದೇಶ / ವಸಾಹತುಗಳ ಒಟ್ಟು ವೆಚ್ಚದಲ್ಲಿ ಸರ್ಕಾರದ ಅನುದಾನವನ್ನು ಕಡಿತಗೊಳಿಸಿ ಉಳಿದ ವೆಚ್ಚವನ್ನು ಆಧಾರಿಸಿ ನಿವೇಶನದ ಬೆಲೆಯನ್ನು ನಿರ್ಣಯಿಸಿ ಹಂಚುವುದಾಗಿ ಒಪ್ಪಿಗೆ ಪತ್ರ.
* ಕೈಗಾರಿಕಾ ನಿವೇಶನ ಹಾಗೂ ಮಳಿಗೆಗಳ ಬೇಡಿಕೆಯ ಬಗ್ಗೆ ಸಂಸ್ಥೆಯಿಂದ ಅಥವಾ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಅವರಿಂದ ತಯಾರಿಸಲಾದ ಮಾರುಕಟ್ಟೆ ಸಮೀಕ್ಷೆ ವರದಿ.

- ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಂಡಿದ್ದರೆ ಟೆಂಡರ ಅಧಿಸೂಚನೆ, ಕಾಮಗಾರಿ ಆದೇಶ ಹಾಗೂ ಇತರೆ ದಾಖಲಾತಿಗಳು.

**(ಸಿ) ನೇರವಾಗಿ ಸರ್ಕಾರದಿಂದ ಸ್ಥಾಪಿತಗೊಂಡ ಸಂಘ / ಸಂಸ್ಥೆಗಳು ಸಲ್ಲಿಸಬೇಕಾದ ದಾಖಲೆಗಳು:**

- ಭೂಮಿಯ ಕ್ರಯ ಪತ್ರ/ ಸ್ವಾಧೀನ ಪತ್ರ.
- ಸಂಘ ಸಂಸ್ಥೆಯು ಸಂಬಂಧ ಪಟ್ಟ ಕಾಯಿದೆಯಡಿ ನೋಂದಣಿ ಮಾಡಿಕೊಂಡಿರುವ ದಾಖಲಾತಿ.
- ಸಂಘದ ಬೈಲಾ ಪ್ರತಿ.
- ಸಂಘದ ಆಡಳಿತ ಸದಸ್ಯರ ಪಟ್ಟಿ ಹಾಗೂ ನೊಂದಾಯಿತ ಒಟ್ಟು ಸದಸ್ಯರ ಸಂಖ್ಯೆ.
- ಸಂಘವು ಈಗಾಗಲೇ ಹೊಂದಿರುವ ಸ್ಥಿರಾಸ್ತಿಗಳ ವಿವರಗಳು ( ಸಿ.ಎ. ರವರಿಂದ ಧೃಡೀಕರಿಸತಕ್ಕದ್ದು)
- ಸಂಘದ ಕಳೆದ ಮೂರು ವರ್ಷಗಳ ಲಾಭ ಮತ್ತು ನಷ್ಟ ಪಟ್ಟಿ ಹಾಗೂ ಬ್ಯಾಲೆನ್ಸ್ ಶೀಟ್ಸ್ (ಸಂಸ್ಥೆಗಳು ಲಾಭದಲ್ಲಿರತಕ್ಕದ್ದು).
- ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾದ ನೀಲಿ ನಕ್ಷೆ ಹಾಗೂ ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳ ಪ್ರಸಕ್ತ ವರ್ಷದ ಎಸ್.ಆರ್. ದರಗಳಂತೆ ಅಂದಾಜು ಪಟ್ಟಿ.
- ಯೋಜನಾ ವೆಚ್ಚ, ಹಣಕಾಸಿನ ಮೂಲ, ಸಂಸ್ಥೆಯ ವಿವರವಾದ ಚಟುವಟಿಕೆಗಳನ್ನೊಳಗೊಂಡಂತೆ ವಿವರವಾದ ಯೋಜನಾ ವರದಿ.
- ಪ್ರಸ್ತುತ ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರೈಸಲು ತಯಾರಿಸಿದ ಪರ್ಟ್ ಚಾರ್ಟ್.
- ಸರ್ಕಾರದ ಅನುದಾನವನ್ನು ಹೊರತುಪಡಿಸಿ ಉಳಿದ ವೆಚ್ಚವನ್ನು ಸಂಸ್ಥೆಯಿಂದ ಭರಿಸುವ ಬಗ್ಗೆ ಒಪ್ಪಿಗೆ ಪತ್ರ.
- ಕಾಮಗಾರಿಗಳ ಪ್ರಗತಿ ಆಧರಿಸಿ ಪ್ರೊರಾಟಾ ಆಧಾರದ ಮೆರೆಗೆ ಅನುದಾನವನ್ನು ಬಿಡುಗಡೆ ಮಾಡುವುದರಿಂದ, ಸಂಸ್ಥೆಯು ಮೊದಲು ತನ್ನ ಪಾಲಿನ ಬಂಡವಾಳವನ್ನು ಹೂಡಿಕೆ ಮಾಡುವುದಾಗಿ ತಿಳಿಸುವ ಬಗ್ಗೆ ಒಪ್ಪಿಗೆ ಪತ್ರ.
- ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಂಡಿದ್ದರೆ ಟೆಂಡರ ಅಧಿಸೂಚನೆ, ಕಾಮಗಾರಿ ಆದೇಶ ಹಾಗೂ ಇತರೆ ದಾಖಲಾತಿಗಳು.
- ಸಂಸ್ಥೆಯು ಈವರೆವಿಗೂ ಪೂರ್ಣಗೊಳಿಸಿರುವ ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳ ವಿವರ ಹಾಗೂ ಕಾಮಗಾರಿಗಳ ವೆಚ್ಚದ ವಿವರಗಳನ್ನು ಚಾರ್ಟೆಡ್ ಅಕೌಂಟೆಂಟ್ ರವರಿಂದ ಧೃಡೀಕರಿಸಿ ಸಲ್ಲಿಸುವುದು.
- ಉದ್ದೇಶಿತ ಪ್ರಸ್ತಾವನೆಯನ್ನು ಆಯುಕ್ತರು, ಕೈಗಾರಿಕಾಭಿವೃದಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರ ಮೂಲಕ ಕಳುಹಿಸುವುದು.

## ಸಾಮೂಹಿಕ ಸೌಲಭ್ಯ ಕೇಂದ್ರಗಳ ಸ್ಥಾಪನೆ:

ವಿಶೇಷ ಅಭಿವೃದ್ಧಿ ಯೋಜನೆಯಡಿ ಡಾ.ಡಿ. ಎಂ. ನಂಜುಂಡಪ್ಪರವರ ಅಧ್ಯಕ್ಷತೆಯಲ್ಲಿ ರಚಿಸಿರುವ ಪ್ರಾದೇಶಿಕ ಅಸಮತೋಲನವನ್ನು ನಿವಾರಿಸುವ ಸಮಿತಿಯ ವರದಿಯಲ್ಲಿ ಗುರುತಿಸಿರುವ ಅತೀ ಹಿಂದುಳಿದ, ಅತ್ಯಂತ, ಹಿಂದುಳಿದ ತಾಲ್ಲೂಕುಗಳಲ್ಲಿ ಸಾಮೂಹಿಕ ಸೌಲಭ್ಯ ಕೇಂದ್ರಗಳನ್ನು ಸಂಘ / ಸಂಸ್ಥೆಳ ಮೂಲಕ ಸ್ಥಾಪಿಸಲು ಉತ್ತೇಜಿಸುವ ಅವಶ್ಯಕತೆ ಇರುತ್ತದೆ. ಈ ಕೇಂದ್ರಗಳಿಂದ ಕುಶಲಕರ್ಮಿಗಳು ಸೂಕ್ಷ್ಮ ಹಾಗೂ ಸಣ್ಣ ಕೈಗಾರಿಕೆಗಳಿಗೆ ಅವಶ್ಯವಿರುವ ಸೌಲಭ್ಯ ಹಾಗೂ ತರಬೇತಿ, ಉದ್ಯೋಗ ಸೃಜನೆಯ ಜೊತೆಗೆ ಸ್ವಯಂ ಉದ್ಯೋಗ ಚಟುವಟಿಕೆಗಳನ್ನು ಕೈಗೊಳ್ಳಲು ಅನುವಾಗುತ್ತದೆ. ಜಿಲ್ಲಾ ಕೈಗಾರಿಕಾ ಕೇಂದ್ರಗಳು ಗುರುತಿಸಲಾದ ಸಾಮೂಹಿಕ ಸೌಲಭ್ಯ ಕೇಂದ್ರಗಳನ್ನು ಸ್ಥಾಪಿಸಿ ಅನುಷ್ಠಾನಗೊಳಿಸಲು ಸಂಘ / ಸಂಸ್ಥೆಗಳ ಸ್ಥಿರಾಸ್ತಿಗಳಾದ ಯಂತ್ರೋಪಕರಣಗಳಿಗೆ ಮಾತ್ರ ಖರೀದಿಗೆ ಅನುದಾನ ನೀಡಲು ಈ ಕೆಳಕಂಡ ಅರ್ಹತೆ ಆಯ್ಕೆ ಮಾನದಂಡಗಳನ್ನು ಅನುಸರಿಸುವುದು.

(ಎ) **ಸಂಘ ಸಂಸ್ಥೆಗಳ ಅರ್ಹತೆ/ಆಯ್ಕೆ ಮಾನದಂಡ:**

- ಸಂಘ / ಸಂಸ್ಥೆಗಳು ಕೋ-ಆಪರೇಟಿವ್ ಸೊಸೈಟಿ ಕಾಯ್ದೆ 1957/ಸೊಸೈಟಿ ರಿಜಿಸ್ಟ್ರೇಷನ್ ಕಾಯ್ದೆ 1960 ಅಥವಾ ಟ್ರಸ್ಟ್ ಕಾಯಿದೆಯಂತೆ ನೊಂದಣಿಯಾಗಿರತಕ್ಕದ್ದು.
- ಸಂಘ ಸಂಸ್ಥೆಯು ಕೈಗಾರಿಕಾ ಚಟುವಟಿಕೆಯಲ್ಲಿ ತೊಡಗಿರತಕ್ಕದ್ದು.
- ಸಂಘ/ಸಂಸ್ಥೆಯು ಸಾಮಾನ್ಯಸೌಲಭ್ಯ ಕೇಂದ್ರವನ್ನು ಸ್ಥಾಪಿಸಲು ಸ್ವಂತ ಭೂಮಿ/ನಿವೇಶನ ಹೊಂದಿರತಕ್ಕದ್ದು.
- ಸಂಘ/ಸಂಸ್ಥೆಗಳು ಬೈಲಾದಲ್ಲಿ ಕೈಗಾರಿಕಾ ಚಟುವಟಿಕೆ ಸಂಬಂಧಿಸಿದಂತೆ ಉದ್ದೇಶಗಳನ್ನು ಹೊಂದಿರಬೇಕು.
- ಸಂಘ / ಸಂಸ್ಥೆಗಳು ಸ್ಥಾಪನೆಯಾಗಿ ಕನಿಷ್ಠ 3 ವರ್ಷ ಕಾರ್ಯ ನಿರ್ವಹಿಸಿರತಕ್ಕದ್ದು. ಕೈಗಾರಿಕಾ ಚಟುವಟಿಕೆಗಳಲ್ಲಿ ಕನಿಷ್ಠ 2 ವರ್ಷಗಳ ಅನುಭವ ಹೊಂದಿರತಕ್ಕದ್ದು.
- ನಿವೇಶನ ಹಾಗೂ ಕಟ್ಟಡವನ್ನು ಹೊಂದಿರುವ ಸಂಘ / ಸಂಸ್ಥೆಗಳು ಹಾಗೂ ಸ್ಥಳೀಯ ಎಂಎಸ್ಎಂಇ ಘಟಕಗಳಿಗೆ ಉಪಯೋಗವಾಗುವಂತಹ ಕೇಂದ್ರಗಳಿಗೆ ಪ್ರಾಶಸ್ತ್ಯ ನೀಡಲಾಗುವುದು.
- ಸಂಘ/ಸಂಸ್ಥೆಯು ಯಾವುದೇ ಇಲಾಖೆ / ಸಂಸ್ಥೆಗಳ ಕಪ್ಪುಪಟ್ಟಿಯಲ್ಲಿ ಸೇರಿರತಕ್ಕುದಲ್ಲ.
- ಕೇಂದ್ರದ ಚಟುವಟಿಕೆಗಳು ಉದ್ಯೋಗ ಸೃಜನೆ, ಕುಶಲಕರ್ಮಿಗಳು ಹಾಗೂ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಪೂರಕವಾಗಿರತಕ್ಕದ್ದು.
- ಸಂಘ/ಸಂಸ್ಥೆ ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಿ ವಿಶೇಷ ಅಭಿವೃದ್ಧಿ ಯೋಜನೆಯ ಕ್ರಿಯಾ ಯೋಜನೆಯಲ್ಲಿ ಅಳವಡಿಸಿ ಯೋಜನೆ ಕಾರ್ಯಕ್ರಮ ಮತ್ತು ಸಂಯೋಜನ ಇಲಾಖೆಯಿಂದ ಅನುಮೋದನೆ ಪಡೆಯತಕ್ಕದ್ದು.
- ಉತ್ಪಾದನಾ ವಲಯಕ್ಕೆ ಸಂಬಂಧಿಸಿದ ಕೈಗಾರಿಕಾ ಚಟುವಟಿಕೆಗಳಿಗೆ ಮಾತ್ರ ಪರಿಗಣಿಸಲಾಗುವುದು. ಉದ್ದೇಶಿತ ಕೈಗಾರಿಕಾ ಚಟುವಟಿಕೆಗಳು ಇತರೆ ಇಲಾಖೆ ಯೋಜನೆಗಳಿಂದ ಅನುದಾನ ಪಡೆದಿಲ್ಲ ಎಂದು ಘೋಷಣಾ ಪತ್ರ ಪಡೆಯತಕ್ಕದ್ದು.

(ಬಿ) **ಸಂಘ /ಸಂಸ್ಥೆಗಳು ನೀಡಬೇಕಾದ ದಾಖಲಾತಿಗಳು:**

- ಭೂಮಿ/ನಿವೇಶನದ ದಾಖಲಾತಿ
- ಸಂಘ/ಸಂಸ್ಥೆಯು ಸಂಬಂಧಪಟ್ಟ ಕಾಯಿದೆಯಡಿ ನೊಂದಣಿ ಮಾಡಿಕೊಂಡಿರುವ ಧೃಢೀಕೃತ ದಾಖಲಾತಿ
- ಸಂಘದ ಬೈಲಾ ಪ್ರತಿ
- ಸಂಘವು ಈಗಾಗಲೇ ಹೊಂದಿರುವ ಸ್ಥಿರಾಸ್ತಿ ವಿವರಗಳು (ಸಿ.ಎ. ರವರಿಂದ ದೃಢೀಕರಿಸತಕ್ಕದ್ದು) (ಸಂಸ್ಥೆಗಳು ಲಾಭದಲ್ಲಿರತಕ್ಕದ್ದು).
- ಸಂಸ್ಥೆಯ ಕೈಗಾರಿಕಾ ಚಟುವಟಿಕೆ ಬಗ್ಗೆ ವರದಿ
- ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳಿಂದ ವಿದ್ಯುತ್‌ಚ್ಛಕ್ತಿ ಸರಬರಾಜು ಮಂಜೂರಾತಿ ಪತ್ರದ ಪ್ರತಿ
- ಕಟ್ಟಡದ ನಿರ್ಮಾಣದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಅನುಮೋದನೆ ದಾಖಲಾತಿ
- ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ನಕ್ಷೆ ಮತ್ತು ಅಂದಾಜುಪಟ್ಟಿ.
- ಸಂಸ್ಥೆಯ ಕಳೆದ 3 ವರ್ಷಗಳ ಬ್ಯಾಲನ್ಸ್ ಶೀಟ್ಸ್, ಲಾಭ ಮತ್ತು ನಷ್ಟ ತ:ಖ್ತೆ.
- ಬ್ಯಾಲನ್ಸ್‌ಶೀಟ್ಸ್‌ನಲ್ಲಿ ಸಾಕಷ್ಟು ಅನುದಾನ ಲಭ್ಯತೆಯಿಲ್ಲದಿದ್ದಲ್ಲಿ ಸಂಸ್ಥೆಯು ತನ್ನ ಪಾಲಿನ ವಂತಿಗೆಯನ್ನು ಭರಿಸಲು ಸಂಪನ್ಮೂಲವನ್ನು ಕ್ರೋಢೀಕರಿಸುವ ವಿಧಾನ.
- ಯೋಜನಾವೆಚ್ಚ, ಹಣಕಾಸಿನ ಮೂಲ, ಯಂತ್ರೋಪಕರಣ ಹಾಗೂ ದರಗಳ ವಿವರ ಅನುಭವ, ಸಂಸ್ಥೆಯ ಚಟುವಟಿಕೆಗಳನ್ನೊಳಗೊಂಡಂತೆ ವಿವರವಾದ ಯೋಜನಾ ವರದಿ.
- ಸಂಸ್ಥೆ/ಸಂಘದ ಉದ್ದೇಶಿತ ಯೋಜನಾ ವರದಿಯನ್ನು ಎಂಎಸ್ಎಂಇ-ಡಿಐ, ಸಿಡಾಕ್, ಟೆಕ್ಸಾಕ್ ಹಾಗೂ ಇತರೆ ಅಂಗೀಕೃತ ಸಂಸ್ಥೆಗಳಿಂದ ಮೌಲ್ಯ ಮಾಪನ ಮಾಡಿಸತಕ್ಕದ್ದು.

(ಸಿ) **ಯೋಜನೆಯಡಿ ಅನುದಾನದ ಮಿತಿ:**

ಸಾಮಾನ್ಯ ಸೌಲಭ್ಯ ಕೇಂದ್ರಗಳ ಸ್ಥಾಪನೆಗೆ ಯೋಜನಾ ವೆಚ್ಚದ ಶೇಕಡ 75 ರಷ್ಟು ಗರಿಷ್ಟ ರೂ.50.00 / 75.00 ಲಕ್ಷಗಳವರೆಗೂ, ಈ ಯೋಜನೆಯಡಿ ಕೆಳಕಂಡಂತೆ ಅನುದಾನ ನೀಡಲಾಗುವುದು.

1) ಭೂಮಿ/ನಿವೇಶನ ಹಾಗೂ ಕಟ್ಟಡ ನಿರ್ಮಾಣ ವೆಚ್ಚವನ್ನು ಸಂಸ್ಥೆಯೇ ಭರಿಸತಕ್ಕದ್ದು.
2) ಹಿಂದುಳಿದ ತಾಲ್ಲೂಕುಗಳಲ್ಲಿ ಯೋಜನಾ ವೆಚ್ಚದ ಶೇಕಡ 75 ರಷ್ಟು ಗರಿಷ್ಠ ರೂ. 50.00 ಲಕ್ಷಗಳವರೆಗೂ ಯಂತ್ರೋಪಕರಣ/ಉಪಕರಣಗಳ ಖರೀದಿಗೆ ಅನುದಾನ ಒದಗಿಸಬಹುದು. ಉಳಿದ ವೆಚ್ಚವನ್ನು ಸಂಸ್ಥೆಯೇ ಭರಿಸತಕ್ಕದ್ದು.
3) ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಯೋಜನಾ ವೆಚ್ಚದ ಶೇಕಡ 75 ರಷ್ಟು ಗರಿಷ್ಠ ರೂ. 75.00 ಲಕ್ಷಗಳವರೆಗೂ ಯಂತ್ರೋಪಕರಣ/ಉಪಕರಣಗಳ ಖರೀದಿಗೆ ಅನುದಾನ ಒದಗಿಸಬಹುದು. ಉಳಿದ ವೆಚ್ಚವನ್ನು ಸಂಸ್ಥೆಯೇ ಭರಿಸತಕ್ಕದ್ದು.

**(ಡಿ) ಸಂಸ್ಥೆಯು ಪಾಲಿಸಬೇಕಾದ ನಿಬಂಧನೆಗಳು:**

- ಕಟ್ಟಡವು ಸಾಮೂಹಿಕ ಸೌಲಭ್ಯ ಕೇಂದ್ರಕ್ಕೆ ಪೂರಕವಾಗಿರಬೇಕು. ಸಂಘ/ಸಂಸ್ಥೆಯು ತನ್ನ ಪಾಲಿನ ಬಂಡವಾಳವನ್ನು ಸ್ವಂತ ಮೂಲಗಳಿಂದ ಭರಿಸಿದಲ್ಲಿ ಸದರಿ ಆಸ್ತಿಯ ಮೇಲೆ 1ನೇ ಚಾರ್ಜನ್ನು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಗೆ ನೀಡತಕ್ಕದ್ದು. ಸಂಘ/ಸಂಸ್ಥೆಯು ಹಣಕಾಸು ಸಂಸ್ಥೆ/ ಬ್ಯಾಂಕುಗಳಿಂದ ಸಾಲ ಪಡೆದಿದ್ದಲ್ಲಿ ಈ ಆಸ್ತಿಯ ಮೇಲೆ 2ನೇ ಚಾರ್ಜನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ನೀಡತಕ್ಕದ್ದು. ಸದರಿ ಸಂಘ/ಸಂಸ್ಥೆಯು ನಿರಂತರವಾಗಿ 7 ವರ್ಷಗಳವರೆಗೆ ಉದ್ದೇಶಿತ ಚಟುವಟಿಕೆಗಳನ್ನು ಮಾಡಿದ್ದಲ್ಲಿ ಪಡೆದ ಚಾರ್ಜ್‌ಗಳನ್ನು ಹಿಂತಿರುಗಿಸಬಹುದು.
- ಸಂಘ/ಸಂಸ್ಥೆಯ ಸಾಮೂಹಿಕ ಸೌಲಭ್ಯ ಕೇಂದ್ರದ ಕಟ್ಟಡದ ಮೇಲೆ ಸಂಘದ ಹೆಸರು ಹಾಗೂ ಯಾವ ಯೋಜನೆಯಡಿ ಸ್ಥಾಪನೆಯಾಗಿದೆ ಎಂದು ನಾಮಫಲಕದಲ್ಲಿ ಸ್ಪಷ್ಟವಾಗಿ ಮುದ್ರಿಸತಕ್ಕದ್ದು.
- ಯೋಜನೆಯಡಿ ಸೃಜಿಸಿದ ಯಂತ್ರೋಪಕರಣ/ಉಪಕರಣಗಳು ಸರ್ಕಾರದ ಆಸ್ತಿಯಾಗಿದ್ದು, ಯಾವುದೇ ಕಾರಣಕ್ಕೂ ಇವುಗಳನ್ನು 7 ವರ್ಷಗಳವರೆಗೆ ಪರಬಾರೆ, ಅಡಮಾನ, ವರ್ಗಾವಣೆ ಮಾಡತಕ್ಕದ್ದಲ್ಲ.
- ಈ ಯೋಜನೆಯಲ್ಲಿ ಹಳೆಯ ಯಂತ್ರೋಪಕರಣ/ಉಪಕರಣಗಳ ಖರೀದಿಗೆ ಅವಕಾಶ ಇರುವುದಿಲ್ಲ.
- ಸಾಮೂಹಿಕ ಸೌಲಭ್ಯ ಕೇಂದ್ರಗಳನ್ನು ಕೈಗಾರಿಕಾ ಪ್ರದೇಶ/ವಸಾಹತುವಿನಲ್ಲಿ ಸ್ಥಾಪಿಸಿದಲ್ಲಿ ಹೆಚ್ಚಿನ ಆದ್ಯತೆ ನೀಡಲಾಗುವುದು.
- ಸಾಮಾನ್ಯ ಸೌಲಭ್ಯ ಕೇಂದ್ರ ಸ್ಥಾಪನೆಯಾದನಂತರ ಕನಿಷ್ಠ 7 ವರ್ಷಗಳ ಸತತವಾಗಿ ಗುಣ ಮಟ್ಟದ ಸೇವೆಯನ್ನು ನೀಡತಕ್ಕದ್ದು
- ಸಂಘ/ಸಂಸ್ಥೆಯು ಸಾಮೂಹಿಕ ಸೌಲಭ್ಯ ಕೇಂದ್ರ ನಿರ್ವಹಣೆಯ ಕುರಿತಂತೆ ಸರ್ಕಾರದೊಡನೆ ಒಡಂಬಡಿಕೆ ಒಪ್ಪಂದ(ಎಂ.ಓ.ಯು) ಮಾಡಿಕೊಳ್ಳತಕ್ಕದ್ದು.
- ಜಿಲ್ಲೆಯ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ರವರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯು ಸಿಎಫ್‌ಸಿವು ಕೆಟಿಪಿಪಿ ನಿಯಮಗಳನ್ನು ಪಾಲಿಸುವ ಕುರಿತು ಮಾರ್ಗದರ್ಶನ ಮತ್ತು ಸಲಹೆಗಳನ್ನು ನೀಡತಕ್ಕದ್ದು ಹಾಗೂ ನಿಯಮಗಳನ್ನು ಪಾಲಿಸುತ್ತಿರುವ ಬಗ್ಗೆ ಪರಿಶೀಲನೆ ಹಾಗೂ ಉಸ್ತುವಾರಿ ವಹಿಸತಕ್ಕದ್ದು. ಸರ್ಕಾರದಿಂದ ಅನುಮೋದನೆಗೊಂಡ ಹಣ ಬಿಡುಗಡೆಯ ಪ್ರಸ್ತಾವನೆಯಲ್ಲಿ ಸದರಿ ಸಮಿತಿಯು ಕೆಟಿಪಿಪಿ ನಿಯಮಗಳ ಪಾಲನೆಯ ದೃಢೀಕರಣ ನೀಡತಕ್ಕದ್ದು.
- ಸಂಘ/ಸಂಸ್ಥೆಯು ಸಾಮೂಹಿಕ ಸೌಲಭ್ಯ ಕೇಂದ್ರಕ್ಕೆ ಅವಶ್ಯಕತೆ ಇರುವ ಗುಣಮಟ್ಟದ ಯಂತ್ರೋಪಕರಣಗಳು/ ಉಪಕರಣಗಳನ್ನು ಕೆಟಿಪಿಪಿ ನಿಯಮಾನುಸಾರ ಖರೀದಿಗೆ ಕ್ರಮ ಕೈಗೊಳ್ಳತಕ್ಕದ್ದು. ಖರೀದಿಯಲ್ಲಿ ಕೆಟಿಪಿಪಿ ನಿಯಮಗಳನ್ನು ಪಾಲಿಸಿರುವ ಬಗ್ಗೆ ಸದರಿ ಉಸ್ತುವಾರಿ ಸಮಿತಿಯಿಂದ ದೃಢೀಕರಿಸಿ, ದಾಖಲಾತಿಗಳನ್ನು ಇಲಾಖೆಗೆ ಸಲ್ಲಿಸುವುದು.
- ಯಂತ್ರೋಪಕರಣಗಳು/ಉಪಕರಣಗಳ ಖರೀದಿಗಾಗಿ ಇಲಾಖೆಯಿಂದ ಬಿಡುಗಡೆ ಮಾಡುವ ಅನುದಾನಕ್ಕೆ ಸರಿಸಮಾನವಾಗಿ (Prorata basis) ಅಥವಾ ಹೆಚ್ಚಾಗಿ ಸಂಸ್ಥೆರವರು ಸಹ ಬಂಡವಾಳ ಹೂಡಿಕೆ ಮಾಡತಕ್ಕದ್ದು,
- ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳಿಂದ ವಿದ್ಯುಚ್ಛಕ್ತಿ ಸರಬರಾಜು ಮಂಜೂರಾತಿ ಪತ್ರದ ಪ್ರತಿ ಸಲ್ಲಿಸತಕ್ಕದ್ದು.
- ಸರಬರಾಜುದಾರರಿಂದ ಸಂಸ್ಥೆರವರು ಯಂತ್ರೋಪಕರಣ/ ಉಪಕರಣಗಳಿಗೆ ಖರೀದಿ ಸಮಯದಲ್ಲಿ ಕಡ್ಡಾಯವಾಗಿ Performance warranty/ Guarantee ಪಡೆಯತಕ್ಕದ್ದು.

- ಸರ್ಕಾರದಿಂದ ಮಂಜೂರು ಮಾಡಿ ಬಿಡುಗಡೆಯಾಗಿರುವ ಅನುದಾನದ ಹಣವನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಸಂಬಂಧಿಸಿದ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಮತ್ತು ಸಂಘದ ಜಂಟಿ ಖಾತೆ ತೆರೆದು ನಿರ್ವಹಿಸತಕ್ಕದ್ದು.
- ಸಂಘ/ಸಂಸ್ಥೆಯು ಯೋಜನೆ ಅನುಮೋದನೆಯಲ್ಲಿ ವಿಧಿಸಿರುವ ಎಲ್ಲಾ ಷರತ್ತು ಮತ್ತು ನಿಬಂದನೆಗಳನ್ನು ಪಾಲಿಸಿ, ಅಗತ್ಯ ದಾಖಲಾತಿಗಳನ್ನು ಸಲ್ಲಿಸಿ ಅನುಮೋದನೆ ಪಡೆದ ನಂತರ ಯೋಜನೆ ಅನುಷ್ಠಾನಕ್ಕೆ ಕ್ರಮ ಜರುಗಿಸತಕ್ಕದ್ದು.
- ಸಂಘ/ಸಂಸ್ಥೆಯು ಸಾಮೂಹಿಕ ಸೌಲಭ್ಯ ಕೇಂದ್ರ ಕುರಿತಂತೆ ಸರ್ಕಾರವು ಆಗಿಂದಾಗ್ಗೆ ಸೂಚಿಸುವ ನಿರ್ದೇಶನ ಹಾಗೂ ನಿಯಮಗಳಂತೆ ಪಾಲನೆ ಮಾಡತಕ್ಕದ್ದು.

**(ಇ) ಅನುದಾನ ಬಿಡುಗಡೆ ಹಾಗೂ ಬಳಕೆ ವಿಧಾನ:**

- ಸಂಘ/ಸಂಸ್ಥೆಯವರು ತನ್ನ ಪಾಲಿನ ಹಣವನ್ನು ಸ್ವಂತ ಬಂಡವಾಳದಿಂದ ಹೂಡಿಕೆ ಮಾಡಿದಲ್ಲಿ ಆಸ್ತಿಯ ಮೇಲೆ 1ನೇ ಚಾರ್ಜ್‌ನ್ನು ಮಾರ್ಟ್‌ಗೇಜ್ ಡೀಡ್ (ಅಡಮಾನ ಪತ್ರ) ಮೂಲಕ ಇಲಾಖೆಗೆ ನೀಡತಕ್ಕದ್ದು. ಹಣಕಾಸು ಸಂಸ್ಥೆ/ಬ್ಯಾಂಕ್‌ಗಳಿಂದ ಸಾಲ ಪಡೆದಿದ್ದಲ್ಲಿ ಸದರಿ ಸಂಸ್ಥೆಯಿಂದ ಸದರಿ ಆಸ್ತಿಯ ಮೇಲೆ 2ನೇ ಚಾರ್ಜ್‌ನ್ನು ಇಲಾಖೆಗೆ ನೀಡತಕ್ಕದ್ದು.
- ಬಾಡಿಗೆ ಕಟ್ಟಡವಾಗಿದ್ದಲ್ಲಿ ಕನಿಷ್ಠ 10 ವರ್ಷಗಳಿಗೆ ಲೀಸ್ ಆದಾರದ ಮೇಲೆ ಪಡೆದಿರತಕ್ಕದ್ದು ಹಾಗೂ ಕರಾರು ಪತ್ರವನ್ನು ನೋಂದಾಯಿಸತಕ್ಕದ್ದು.
- ಸಂಘ/ಸಂಸ್ಥೆಯು ಕಟ್ಟಡವನ್ನು ಹೊಂದಿರುವ ಬಗ್ಗೆ ದಾಖಲಾತಿಯನ್ನು ಸಲ್ಲಿಸತಕ್ಕದ್ದು.
- ಕಟ್ಟಡದ ಸಂಬಂಧಿಸಿದಂತೆ, Chartered Engineer ರವರಿಂದ ಮೌಲ್ಯ ದೃಢೀಕರಣ (Valuation Certificate) ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.
- ಸಂಸ್ಥೆಯು ಸಾಮೂಹಿಕ ಸೌಲಭ್ಯ ಕೇಂದ್ರಕ್ಕೆ ಅವಶ್ಯವಾಗಿರುವ ಯಂತ್ರೋಪಕರಣಗಳ ಪಟ್ಟಿಯನ್ನು ಆಯ್ಕೆಯ ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆಯತಕ್ಕದ್ದು. ಇವುಗಳಲ್ಲಿ ಯಾವುದೇ ಬದಲಾವಣೆ ಮಾಡಬೇಕಾದ್ದಲ್ಲಿ ಆಯ್ಕೆ ಸಮಿತಿಯ ಸಹಮತಿಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.
- ಅನುಮೋದಿತ ಯಂತ್ರೋಪಕರಣ/ಉಪಕರಣಗಳನ್ನು ಖರೀದಿಸಲು ಅಧಿಕೃತ ಸರಬರಾಜುದಾರಿಗೆ ಕಾರ್ಯಾದೇಶ ನೀಡಿ, ಮುಂಗಡ ಹಣ ಪಾವತಿಸಿದ ನಂತರ ಅನುದಾನದ ಶೇಕಡ 30 ರಷ್ಟನ್ನು 1ನೇ ಕಂತಾಗಿ ಬಿಡುಗಡೆ ಮಾಡಲಾಗುವುದು.
- ಸಂಘ/ಸಂಸ್ಥೆಯು ತನ್ನ ಪಾಲಿನ ಯಂತ್ರೋಪಕರಣಗಳ ಪೂರ್ಣ ಮೊತ್ತವನ್ನು ಭರಿಸಿದ ನಂತರ ಯಂತ್ರೋಪಕರಣಗಳ ಅಳವಡಿಕೆ/ಜೋಡಣೆಯ ನಂತರ ಉಪಯುಕ್ತತಾ ಪ್ರಮಾಣ ಪತ್ರವನ್ನು ಸಲ್ಲಿಸಿದ ನಂತರ ಸಂಬಂಧಪಟ್ಟ ಜಿಲ್ಲೆಯ ಜಂಟಿ ನಿರ್ದೇಶಕರು, ಜಿಕೈಕೇ, ಇವರು ಸ್ಥಳ ಪರಿಶೀಲನೆ/ತಪಾಸಣಾ ವರದಿಯ ಮೇಲೆ ಉಳಿದ ಶೇಕಡ 70 ರಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗುವುದು.

**ಅನುದಾನ ಬಳಕೆ:**

- ಬಿಡುಗಡೆಯಾದ ಅನುದಾನವನ್ನು ಅನುಮೋದಿತ ಕಾರ್ಯಕ್ರಮಗಳಿಗೆ ಮಾತ್ರ ಬಳಸತಕ್ಕದ್ದು.
- ಯೋಜನಾ ವೆಚ್ಚಕ್ಕಿಂತ ಹೆಚ್ಚುವರಿಯಾದಲ್ಲಿ ಅದನ್ನು ಸಂಸ್ಥೆಯೇ ಭರಿಸತಕ್ಕದ್ದು.
- ಯೋಜನೆ ಅನುಷ್ಠಾನವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ಅದರಡಿಯಲ್ಲಿ ರೂಪಿಸಿರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
- ಯೋಜನೆ ಅನುಷ್ಠಾನವನ್ನು ಪರ್ಟ ಚಾರ್ಟ ಪ್ರಕಾರ ಪೂರ್ಣಗೊಳಿಸಿ ಉಪಯುಕ್ತತಾ ಪ್ರಮಾಣ ಪತ್ರ ಮತ್ತು ಖರ್ಚಿನ ವಿವರ ಸಲ್ಲಿಸತಕ್ಕದ್ದು.
- ಸರ್ಕಾರವು ಆಗಿಂದಾಗ್ಗೆ ಸೂಚಿಸುವ ನಿಯಮ ಹಾಗೂ ನಿರ್ದೇಶನಗಳ ಪಾಲನೆ ಮಾಡತಕ್ಕದ್ದು.
- ಸೃಜಿಸಿರುವ ಯಂತ್ರೋಪಕರಣಗಳಿಗೆ ಸಂಬಂಧಿಸಿದಂತೆ ಗುಣಮಟ್ಟದ ಬಗ್ಗೆ ಮೂರನೇ ವ್ಯಕ್ತಿ/ ಸಂಸ್ಥೆಯಿಂದ ಖಾತರಿ ಪಡಿಸಿ ವರದಿ ಸಲ್ಲಿಸತಕ್ಕದ್ದು.

ಯೋಜನೆ ಅನುಷ್ಠಾನ:

- ಯೋಜನೆ, ಕಾರ್ಯಕ್ರಮ ಮತ್ತು ಸಾಂಖ್ಯಿಕ ಇಲಾಖೆಯು ಆಯಾ ವರ್ಷದ ಆಯವ್ಯಯದಲ್ಲಿ ಇಲಾಖೆಗೆ ನಿಗದಿಡಿಸಿರುವ ಅನುದಾನಕ್ಕೆ ಕ್ರಿಯಾಯೋಜನೆಯನ್ನು ಸಂಬಂಧ ಪಟ್ಟ ಅನುಷ್ಠಾನ ಸಂಸ್ಥೆಗಳಿಂದ ಆಯುಕ್ತರು, ಕೈಗಾರಿಕಾಭಿವೃದ್ಧಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರು ಪಡೆದು ಸರ್ಕಾರದ ಮುಖಾಂತರ ಯೋಜನಾ ಇಲಾಖೆಯ ಅನುಮೋದನೆಯನ್ನು ಪಡೆಯುವುದು.
- ಅನುದಾನ ಬಿಡುಗಡೆಗೆ ಸಂಬಂಧಿಸಿದಂತೆ ಅಗತ್ಯ ದಾಖಲೆಗಳೊಂದಿಗೆ ಅನುಷ್ಠಾನ ಸಂಸ್ಥೆಗಳು ಪ್ರಸ್ತಾವನೆಯನ್ನು ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.
- ನಿರ್ದೇಶನಾಲಯವು ಪ್ರಸ್ತಾವನೆಯನ್ನು ಮಾರ್ಗಸೂಚಿಯನ್ವಯ ಪರಿಶೀಲಿಸಿದ ನಂತರ ಅನುದಾನ ಬಿಡುಗಡೆಗೆ ಸರ್ಕಾರಕ್ಕೆ ಸಲ್ಲಿಸುವುದು.
- ಅನುಷ್ಠಾನ ಸಂಸ್ಥೆಯು ಬಿಡುಗಡೆಯಾಗಿರುವ ಅನುದಾನವನ್ನು ಸದ್ಬಳಕೆ ಮಾಡಲು ಕೈಗೊಂಡಿರುವ ಕ್ರಮವನ್ನು ಪರಿಶೀಲಿಸಿ. ತದನಂತರ ನಿರ್ದೇಶನಾಲಯವು ಬಾಕಿ ಅನುದಾನ ಬಿಡುಗಡೆಗೆ ಕ್ರಮ ಜರುಗಿಸತಕ್ಕದ್ದು.

**ಈ ಆದೇಶದಲ್ಲಿನ ಮಾರ್ಗಸೂಚಿಗಳನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 341 ವೆಚ್ಚ–1/ 2016 ದಿ: 27.08.2016 ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂ: ಪಿಡಿ 32 ಎಫ್‌ಆರ್‌ಓ 2016 ದಿ: 17.08.2016 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.**

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

S. Nagaraj 30/08/2016
[ಎಸ್. ನಾಗರಾಜ]
ಪೀಠಾಧಿಕಾರಿ [ಸಪ್ರಕೈ],
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

**ಇವರಿಗೆ:**

***ಸಂಕಲಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 50 ಪ್ರತಿಗಳನ್ನು ಈ ಶಾಖೆಗೆ ಒದಗಿಸಲು ಕೋರಲಾಗಿದೆ.***

**ಪ್ರತಿಗಳು:**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ. 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂ.5398, ಬೆಂಗಳೂರು–560001.
2. ಪ್ರಧಾನ ಮಹಾಲೇಖಪಾಲರು (ಎ & ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂ.5329, ಬೆಂಗಳೂರು–560001.
3. ಸರ್ಕಾರದ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–1.
5. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಮಾನ್ಯ ಸಣ್ಣ ಕೈಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
8. ಆಂತರಿಕ ಆರ್ಥಿಕ ಸಲಹೆಗಾರರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು–1.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಹಿರಿಯ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.

11. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ [ವೆಚ್ಚ-1], ವಿಧಾನಸೌಧ, ಬೆಂಗಳೂರು-1.
12. ಸರ್ಕಾರದ ಅಧೀನ ಕಾರ್ಯದರ್ಶಿ [ಸಮನ್ವಯ ಮತ್ತು ಸೇವೆಗಳು], ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು-1
13. ಹೆಚ್ಚುವರಿ ಪ್ರತಿಗಳು ರಕ್ಷಾ ಕಡತಕ್ಕೆ.